


ಡಾ. ಎಸ್. ರಾಮಮೂರ್ತಿ

# 16-2-2017ರಿಂದ 22-2-2017ರವರೆಗೆ


**ಮೇಷ**

ವಾರದ ಆರಂಭದಲ್ಲಿ ಸಮಾಧಾನ. ಕುಟುಂಬ ಸದಸ್ಯರಲ್ಲಿ ಒಮ್ಮತ. ಶ್ರಮವಿಲ್ಲದೆ ಕಾರ್ಯ ಸಿದ್ಧಿ. ಲೇವಾದೇವಿಗಳಲ್ಲಿ ಲಾಭ. ಹಿತ ಸುದ್ದಿ. ವಾರದ ಮಧ್ಯಭಾಗದಲ್ಲಿ ಒತ್ತಡ. ಅನಾವಶ್ಯಕ ತಿರುಗಾಟ. ಉದ್ಯೋಗದಲ್ಲಿ ತಪ್ಪುಗಳಾಗುವಿಕೆ. ವ್ಯವಹಾರಗಳಲ್ಲಿ ಕಲಹ ಸಂಭವ. ಆರೋಗ್ಯ ವ್ಯತ್ಯಯ. ವಾರಾಂತ್ಯ ಅನುಕೂಲ, ಧೈರ್ಯ. ಶುಭ ದಿನ: 17; ಶಿವ ಮತ್ತು ದುರ್ಗಾ ಅಷ್ಟೋತ್ತರ ಪಠಿಸಿ


**ವೃಷಭ**

ವಾರದ ಮಧ್ಯಭಾಗದವರೆಗೂ ಮನಃಶಾಂತಿ. ನಿರೀಕ್ಷೆಯಂತೆ ಕಾರ್ಯ ಸಿದ್ಧಿ. ವ್ಯಾಪಾರ ವಹಿವಾಟುಗಳಲ್ಲಿ ಸೂಕ್ತ ಲಾಭ. ಆತ್ಮೀಯರಿಂದ ಸಹಾಯ. ಕುಟುಂಬ ಸದಸ್ಯರಲ್ಲಿ ಹೊಂದಾಣಿಕೆ. ನೂತನ ವ್ಯಾಪಾರ ಚಿಂತನೆ. ವಾರಾಂತ್ಯದಲ್ಲಿ ಆತಂಕ. ಬರವಣಿಗೆ ಲೆಕ್ಕಪತ್ರಗಳಲ್ಲಿ ಒತ್ತಡ. ವೃತ್ತಿ ವ್ಯವಹಾರಗಳಲ್ಲಿ ಹಿನ್ನಡೆ. ಶುಭ ದಿನ: 19; ಗಣಪತಿ ಮತ್ತು ದುರ್ಗಾ ಅಷ್ಟೋತ್ತರ ಪಠಿಸಿ


**ಮಿಥುನ**

ಕೆಲಸ ಕಾರ್ಯಗಳು ಆರಂಭದಲ್ಲಿ ಮಂದಗತಿಯಲ್ಲಿದ್ದರೂ. ಸಫಲವಾಗಿ ಮನಃಶಾಂತಿ ದೊರೆಯುವುದು. ವ್ಯಾಪಾರದಲ್ಲಿ ಲಾಭ ವೃದ್ಧಿಯಾಗುವುದು. ಪ್ರೀತಿ ಪಾತ್ರರೊಡನೆ ಸಮಾಲೋಚನೆ ಆತ್ಮ ಬಲ ಹೆಚ್ಚಿಸುವುದು. ವಾಹನ ಯಂತ್ರೋಪಕರಣಗಳು ಸರಾಗವಾಗಿ ನಡೆಯುವುದು. ಶುಭ ದಿನ: 20; ಗಣಪತಿ ಮತ್ತು ಶಿವ ಅಷ್ಟೋತ್ತರ ಪಠಿಸಿ


**ಕಟಕ**

ವಾರದ ಆರಂಭದಲ್ಲಿ ಏನಾದರೊಂದು ತೊಂದರೆ. ವಾಹನಗಳಿಂದ ಅಪಾಯ ಸಂಭವ. ಅಧಿಕ ಖರ್ಚು. ವೃತ್ತಿ ವ್ಯವಹಾರಗಳಲ್ಲಿ ಹಿನ್ನಡೆ. ವಾರದ ಮಧ್ಯಭಾಗದಿಂದ ಚೇತರಿಕೆ. ಏಕಾಗ್ರತೆಯಿಂದ ಕೆಲಸ ಕಾರ್ಯಗಳನ್ನು ಮಾಡಿ ಸಫಲತೆ. ವ್ಯಾಪಾರ ವಹಿವಾಟುಗಳಲ್ಲಿ ಸೂಕ್ತ ಲಾಭ. ಹಿರಿಯರಿಂದ ಸಲಹೆ. ಹಿತಕರ ಸುದ್ದಿ. ಶುಭ ದಿನ: 20; ಗಣಪತಿ ಮತ್ತು ಶಿವ ಅಷ್ಟೋತ್ತರ ಪಠಿಸಿ


**ಸಿಂಹ**

ವಾರದ ಆರಂಭದಲ್ಲಿ ಧೈರ್ಯ. ಶ್ರಮವಿಲ್ಲದೆ ಕಾರ್ಯ ಸಿದ್ಧಿ. ವ್ಯಾಪಾರದಲ್ಲಿ ಲಾಭ. ಕುಟುಂಬ ಸದಸ್ಯರಿಂದ ಸಹಕಾರ. ಹಿತ ಸುದ್ದಿ. ವಾರದ ಮಧ್ಯಭಾಗದಲ್ಲಿ ಆತಂಕ. ವಾಹನಗಳು ದುರಸ್ತಿಗೆ ಬರುವ ಸಂಭವ. ಉದ್ಯೋಗ ವೃತ್ತಿಗಳಲ್ಲಿ ಒತ್ತಡ. ಕೋಪ ಉಂಟಾಗುವ ಸನ್ನಿವೇಶ. ಆರೋಗ್ಯ ವ್ಯತ್ಯಯ. ವಾರಾಂತ್ಯ ಪ್ರಗತಿ. ಶುಭ ದಿನ: 17; ಗಣಪತಿ ಮತ್ತು ಶಿವ ಅಷ್ಟೋತ್ತರ ಪಠಿಸಿ


**ಕನ್ಯಾ**

ವಾರದ ಮಧ್ಯಭಾಗದವರೆಗೂ ಅನುಕೂಲ. ನಿರೀಕ್ಷೆಯಂತೆ ನಡೆಯುವ ಕಾರ್ಯಕಲಾಪಗಳು. ವ್ಯಾಪಾರ ವಹಿವಾಟಿನಲ್ಲಿ ಲಾಭ. ಮಕ್ಕಳ ಅಭಿವೃದ್ಧಿ. ಪ್ರಯಾಣ ಸೌಖ್ಯ. ದೇವತಾಕ್ಷೇತ್ರ ದರ್ಶನ. ವಾರಾಂತ್ಯ ಒತ್ತಡ. ಆರೋಗ್ಯ ವ್ಯತ್ಯಯ. ಅಕಾಲ ಭೋಜನ. ಉದ್ಯೋಗ ವೃತ್ತಿಗಳಲ್ಲಿ ಅಸಮಾಧಾನ. ಶುಭ ದಿನ: 19; ಶಿವ ಮತ್ತು ಪಾರ್ವತಿ ಅಷ್ಟೋತ್ತರ ಪಠಿಸಿ


**ತುಲಾ**

ಕೆಲಸ ಕಾರ್ಯ ಕಲಾಪಗಳು ನಿರೀಕ್ಷೆಯಂತೆ ಸಫಲವಾಗುವುವು. ವ್ಯಾಪಾರ ವಹಿವಾಟುಗಳಲ್ಲಿ ಲಾಭ ವೃದ್ಧಿಯಾಗುವುದು. ಕೋಪ ತಾಪ ಕಡಿಮೆಯಾಗುವುದು. ವಾಹನ ಯಂತ್ರೋಪಕರಣಗಳು ಅಡಚಣೆಯಿಲ್ಲದೆ ನಡೆಯುವುದು. ಕುಟುಂಬ ಸದಸ್ಯರಲ್ಲಿ ಒಮ್ಮತ ಮೂಡುವುದು. ಆಪ್ತರ ಭೇಟಿ. ಶುಭ ದಿನ: 20; ಗಣಪತಿ ಮತ್ತು ಶಿವ ಅಷ್ಟೋತ್ತರ ಪಠಿಸಿ


**ವೃಶ್ಚಿಕ**

ವಾರದ ಆರಂಭದಲ್ಲಿ ಚಂಚಲ ಮನಸ್ಸು, ಸೋಮಾರಿತನ. ನಿಯಮ ಮೀರಿ ದಂಡ ಕಟ್ಟುವ ಸಂಭವ. ವೃತ್ತಿ ಪ್ರವೃತ್ತಿಯಲ್ಲಿ ಸಮಸ್ಯೆ. ಆರೋಗ್ಯ ವ್ಯತ್ಯಯ. ವಾರದ ಮಧ್ಯಭಾಗದಿಂದ ಅನುಕೂಲ. ಮನೋಬಲ ಹೆಚ್ಚುವುದು, ಕಾರ್ಯಸಿದ್ಧಿ. ಪ್ರಯಾಣ ಸೌಖ್ಯ. ಗುರು ಹಿರಿಯರಿಂದ ಸಲಹೆ. ಶುಭ ದಿನ: 17; ಗಣಪತಿ ಮತ್ತು ದುರ್ಗಾ ಅಷ್ಟೋತ್ತರ ಪಠಿಸಿ


**ಧನಸ್ಸು**

ವಾರದ ಆರಂಭದಲ್ಲಿ ಮನಃಶಾಂತಿ. ಕಾರ್ಯ ಕಲಾಪಗಳು ಸಫಲವಾಗುವುವು. ಲೇವಾದೇವಿಗಳಲ್ಲಿ ನಿರೀಕ್ಷಿತ ಲಾಭ. ದೇವತಾ ಕ್ಷೇತ್ರದರ್ಶನ. ವಾರದ ಮಧ್ಯಭಾಗದಲ್ಲಿ ಒತ್ತಡ. ಅಕಾಲ ಭೋಜನ. ಸಂದೇಶಗಳಿಂದ ಅಸಮಾಧಾನ. ಉದ್ಯೋಗ ವೃತ್ತಿ ವ್ಯವಹಾರಗಳಲ್ಲಿ ಹಿನ್ನಡೆ. ವಾರಾಂತ್ಯ ಪರಿಸ್ಥಿತಿ ಉತ್ತಮ. ಶುಭ ದಿನ: 17; ದುರ್ಗಾ ಮತ್ತು ಶಿವ ಅಷ್ಟೋತ್ತರ ಪಠಿಸಿ


**ಮಕರ**

ವಾರದ ಮಧ್ಯಭಾಗದವರೆಗೂ ಸುಖ, ಸೌಖ್ಯ. ಆಟ ಪಾಠಗಳಲ್ಲಿ ಮುನ್ನಡೆ. ಉದ್ಯೋಗ ವೃತ್ತಿಗಳಲ್ಲಿ ಪ್ರಗತಿ. ಹಿರಿಯರಿಂದ ಪ್ರಶಂಸೆ. ಗಣ್ಯ ವ್ಯಕ್ತಿಗಳೊಂದಿಗೆ ಸಮಾಲೋಚನೆ. ವಿರೋಧಿಗಳಿಗೆ ಸೋಲು. ಹಿತಕರ ಸಂದೇಶ. ವಾರಾಂತ್ಯ ಆಲಸ್ಯ. ನಿದ್ರಾಹೀನತೆ, ಅಕಾಲ ಭೋಜನ. ವಾಹನಗಳಿಂದ ತೊಂದರೆ. ವೃತ್ತಿಯಲ್ಲಿ ಹಿನ್ನಡೆ. ಶುಭ ದಿನ: 19; ದುರ್ಗಾ ಮತ್ತು ಶಿವ ಅಷ್ಟೋತ್ತರ ಪಠಿಸಿ


**ಕುಂಭ**

ಒತ್ತಡ ದೂರವಾಗುವುದು. ಕೆಲಸ ಕಾರ್ಯಗಳು ಸರಾಗವಾಗಿ ನಡೆಯುವುದು. ವ್ಯಾಪಾರ ರಂಗದಲ್ಲಿ ಸೂಕ್ತ ಲಾಭ ದೊರಕುವುದು. ಕುಟುಂಬದಲ್ಲಿ ಶಾಂತ ವಾತಾವರಣ ಮೂಡುವುದು. ವಾಹನ ಯಂತ್ರೋಪಕರಣಗಳು ಸುಸ್ಥಿತಿಯಲ್ಲಿರುವುವು. ಪ್ರೀತಿ ಪಾತ್ರರಿಂದ ಸಹಾಯ ಲಭಿಸುವುದು, ಪತ್ರಾಗಮನ. ಶುಭ ದಿನ: 19; ಗಣಪತಿ ಮತ್ತು ಶಿವ ಅಷ್ಟೋತ್ತರ ಪಠಿಸಿ


**ಮೀನ**

ವಾರದ ಆರಂಭದಲ್ಲಿ ಏನಾದರೊಂದು ಚಿಂತೆ. ಸಣ್ಣ ಪುಟ್ಟ ಪೆಟ್ಟಾಗುವ ಸಂಭವ. ವೃತ್ತಿ ವ್ಯವಹಾರಗಳಲ್ಲಿ ಹಿನ್ನಡೆ. ಆರೋಗ್ಯ ವ್ಯತ್ಯಯ. ವಾರದ ಮಧ್ಯಭಾಗದಿಂದ ಅನುಕೂಲ. ನಿರೀಕ್ಷೆಯಂತೆ ಕಾರ್ಯ ಸಾಧನೆ. ಆಟ ಪಾಠಗಳಲ್ಲಿ ಮೇಲುಗೈ. ಕ್ರಯ ವಿಕ್ರಯಗಳಲ್ಲಿ ಲಾಭ. ದೇವತಾ ಕ್ಷೇತ್ರದರ್ಶನ. ಶುಭ ದಿನ: 20; ದುರ್ಗಾ ಮತ್ತು ಶಿವ ಅಷ್ಟೋತ್ತರ ಪಠಿಸಿ